**ದಿನಾಂಕಃ 10.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ **ವಾದಿ ಪರ** ಶ್ರೀ ಪಿ ಎಸ್ **ವಕೀಲರಿಂದಃ**

ನಾನು ಈ ದಾವೆಯಲ್ಲಿ ಹಾಜರುಪಡಿಸಿರುವ ದಾಖಲಾತಿಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ನಿಡಿ-6 ರ ಕ್ರಯ ಪತ್ರದಲ್ಲಿ 20 ಅಡಿಗಳ ಜಾಗವನ್ನು ತಿರುಗಾಡುವ ರಸ್ತೆಯಾಗಿ ಬಿಟ್ಟಿರುತ್ತಾರೆ. ನಿಡಿ-6 ರ ಕ್ರಯ ಪತ್ರದಲ್ಲಿ 20 ಅಡಿಗಳ ಜಾಗವನ್ನು ತಿರುಗಾಡುವ ರಸ್ತೆ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.83/2 ಬಿಯಲ್ಲಿ 30 ಗುಂಟೆ ಜಮೀನನ್ನು ನಾನು ವಾಸದ ಮನೆ ನಿರ್ಮಿಸಲು ಮತ್ತು ರೇಷ್ಮೆ ಹುಳು ಸಾಕಲು ಮನೆ ಕಟ್ಟಿಕೊಳ್ಳಲು ಅನ್ಯಕ್ರಾಂತ ಮಾಡಿಸಿದ್ದೇನೆ ಎಂದರೆ ಸರಿ. ಸದರಿ ಸರ್ವೆ ನಂ.83/2 ಬಿ ಯ 30 ಗುಂಟೆ ಜಮೀನಿನಲ್ಲಿ ನಾನು 12 ನಿವೇಶನಗಳನ್ನು ವಿಂಗಡಿಸಿದ್ದೆನು. ಸದರಿ 12 ನಿವೇಶನಗಳನ್ನು ವಿಂಗಡಿಸಿದ ಬಗ್ಗೆ ಪ್ರಾಧಿಕೃತ ಅಧಿಕಾರಿಗಳಿಂದ ಸ್ಕೆಚ್ ಮಾಡಿಸಿರುತ್ತೇನೆ. ಸದರಿ 12 ನಿವೇಶನಗಳ ಮಧ್ಯದಲ್ಲಿ ರಸ್ತೆ ಬಿಟ್ಟ ಬಗ್ಗೆ ಸರ್ವೆ ಸ್ಕೆಚ್ ಅನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ನಾನು ಸರ್ವೆ ನಂ.83/2 ಬಿ ಯಲ್ಲಿ 30 ಗುಂಟೆ ಜಮೀನನ್ನು ಖರೀದಿಸಿದಾಗ ಓಡಾಡಲು 20 ಅಡಿ ರಸ್ತೆ ಬಿಟ್ಟ ಬಗ್ಗೆ ಲಿಖಿತ ದಾಖಲಾತಿ ಆಗಿರುತ್ತದೆ. ಸದರಿ 20 ಅಡಿ ರಸ್ತೆ ಬಿಟ್ಟ ವಿಚಾರವನ್ನು ಕ್ರಯ ಪತ್ರದಲ್ಲಿಯೇ ನಮೂದಿಸಿರುತ್ತಾರೆ.

ಈ ಹಂತದಲ್ಲಿ ಮುಂದುವರಿದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ